1446 (2220) ಶ್ರೀ ಹಾಲಪ್ಪ ಹೆಚ್ (ಹೊಸನಗರ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸನಗರ ಮತ್ತು ಸಾಗರ ತಾಲ್ಲೂಕಿನಲ್ಲಿ ಜಲವಿದ್ಯುತ್ ಯೋಜನೆಗಳಾದ ಶರಾವತಿ, ಚಕ್ರ, ಸಾವೇಹಕ್ಲು ಮತ್ತು ಮಾಣಿ ಡ್ಯಾಂಗಳಲ್ಲಿ ಮುಳುಗಡೆಯಾಗಿ ನಿರಾಶ್ರಿತರಾದವರು ಹೊಸನಗರ ಮತ್ತು ಶಿವಮೊಗ್ಗ ತಾಲ್ಲೂಕುಗಳಲ್ಲಿ ನೆಲೆಸಿದ್ದು ಅವರು ಇಂದಿಗೂ ವಿದ್ಯುತ್ ಸಂಪರ್ಕವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ರಾಜ್ಯಕ್ಕೆ ಬೆಳಕು ಕೊಟ್ಟ ಈ ನಿರಾಶ್ರಿತರು ಕತ್ತಲೆಯಲ್ಲಿರುವುದು ಅನ್ಯಾಯವಲ್ಲವೆ,

ಇ) ಇಂತಹ ನಿರಾಶ್ರಿತರಿಗೆ ವಿಶೇಷ ಯೋಜನೆಯೊಂದರ ಮೂಲಕ ಬೆಳಕು ಒದಗಿಸುವ ಯೋಚನೆ ಇದೆಯೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಶರಾವತಿ, ಚಕ್ರ, ಸಾವೆಹಕ್ಲು ಮತ್ತು ಮಾಣಿ ಅಣೆಕಟ್ಟುಗಳಲ್ಲಿ ಮುಳುಗಡೆಯಾಗಿರುವ ಪ್ರದೇಶದಲ್ಲಿ ನಿರಾಶ್ರಿತರಾದವರು ಈ ಕೆಳಗಿನ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ

1) ನೀಚಗೋಡು, ಕಂಪದತ್ಯ, ಭೀಮಗೋಡು ಮತ್ತು ಕುಂಬಾರ ಕೇರಿ

2) ಹುಳಿಬಾಗಿಲು ಮತ್ತು ಹೇಮಗೋಡು

3) ಕೈರುಗುಂದ, ತಟ್ಟಿಕೊಪ್ಪ ಮತ್ತು ವಾಚಿಕೊಪ್ಪಲು

4) ತೋರ್ನತೋಟ, ಮಲ್ಲಕ್ಕಿ ಹಾಗೂ ಕಟ್ಟಿಕೊಪ್ಪ

ನೀಚಗೋಡು, ಕಂಪದತ್ಯ, ಭೀಮಗೋಡು, ಕುಂಬಾರಕೇರಿ, ಹುಳಿಬಾಗಿಲು, ಹೇಮಗೋಡು, ಕೈರುಗುಂದ, ತಟ್ಟಿಕೊಪ್ಪ ಮತ್ತು ವಾಚಿಕೊಪ್ಪಲು ಪ್ರದೇಶಗಳಿಗೆ ಕರ್ನಾಟಕ ವಿದ್ಯುತ್ ನಿಗಮದ ವತಿಯಿಂದ ರೇವಣಿ ವಂತಿಗೆ ಯೋಜನೆಯಡಿಯಲ್ಲಿ ಡಿಸೆಂಬರ್ 2000 ರಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ ಹಾಗೂ ಕ್ರಮಾಂಕ 4 ರಲ್ಲಿರುವ ಪ್ರದೇಶಗಳಿಗೆ ಜೂನ್–2001 ರಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ

ಆ ಮತ್ತು ಇ) ಪ್ರಸ್ತುತ ನಿರಾಶ್ರಿತರ ಹೆಸರಿನಲ್ಲಿ ಮೆಸ್ಕಾಂ ನಲ್ಲಿ ನಿರ್ದಿಷ್ಟವಾಗಿ ಅರ್ಜಿ ನೋಂದಣಿಯಾಗಿರುವುದಿಲ್ಲ ನಿರಾಶ್ರಿತರಗಾಗಿಯೇ ವಿದ್ಯುತ್ ಸಂಪರ್ಕಕ್ಕಾಗಿ ವಿಶೇಷ ಯೋಜನೆ ಇರುವುದಿಲ್ಲ ಪುನರ್ವಸತಿ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳನ್ನು ಯೋಜನೆಗಳನ್ನು ಕೈಗೊಳ್ಳುವ ಇಲಾಖೆ, ನಿಗಮ ಮತ್ತು ಸಂಸ್ಥೆಗಳು ಒದಗಿಸಬೇಕಾಗಿರುತ್ತದೆ

1447 (1634) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಾಯಾತ್ ಖಾನ್ (ಹುಬ್ಬಳ್ಳಿ) – ಮಾನ್ಯ ಶ್ರೀ ಒಳಾಡಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಹಿಳೆ ಮತ್ತು ಮಕ್ಕಳ ಸಾಗಾಟ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಇ) ತಪ್ಪಿತಸ್ಥರ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆಯೇ, (ಜಿಲ್ಲಾವಾರು ವಿವರ ನೀಡುವುದು),

ಈ) ಮಹಿಳೆ ಮಕ್ಕಳ ಸಾಗಾಟ ತಡೆಗೆ ಅನುಷ್ಠಾನದಲ್ಲಿರುವ ಶಾಸನ ಯಾವುದು, ಇಲ್ಲವಾದಲ್ಲಿ ಕಾರಣಗಳೇನು, (ವಿವರ ನೀಡುವುದು)

ಶ್ರೀ ಎಂ ಪಿ ಪ್ರಕಾಶ್ (ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ಸಚಿವರು)

ಅ) ಬಂದಿದೆ

ಆ) ಇಂತಹ ಪ್ರಕರಣಗಳು ವರದಿಯಾದಲ್ಲಿ ಕೂಡಲೇ ಕಾನೂನು ರೀತ್ಯ ಕ್ರಮ ಜರುಗಿಸಲಾಗುತ್ತಿದೆ ಇಂತಹ ಪ್ರಕರಣಗಳು ಜರುಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಎಲ್ಲಾ ಅಧೀನಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ ಮಹಿಳಾ ಸಾಂತ್ವನ ಕೇಂದ್ರಗಳಿಂದ ಸಭೆ ನಡೆಸಿ ಮಹಿಳೆಯರಿಗೆ ಇಂತಹ ದುಷ್ಕೃತ್ಯ